**ಎ.ಪಿ. (ಡಿಐಆರ್ ಶ್ರೇಣಿ) ಸುತ್ತೋಲೆ ಸಂಖ್ಯೆ ೧ (ಜೂನ್ ೧, ೨೦೦೦)**
**ಭಾರತೀಯ ರಿಸರ್ವ್ ಬ್ಯಾಂಕು**
**ವಿದೇಶೀ ವಿನಿಮಯ ನಿಯಂತ್ರಣ ಇಲಾಖೆ**
**ಕೇಂದ್ರ ಕಚೇರಿ**
**ಮುಂಬೈ-೪೦೦೦೨೩**

ಎ.ಪಿ. (ಡಿಐಆರ್ ಶ್ರೇಣಿ) ಸುತ್ತೋಲೆ ಸಂಖ್ಯೆ-೧ ಜೂನ್ ೧, ೨೦೦೦
ಎ.ಪಿ. (ಎಫ್.ಎಲ್. ಶ್ರೇಣಿ) ಸುತ್ತೋಲೆ ಸಂಖ್ಯೆ-೧

ವಿದೇಶೀ ವಿನಿಮಯ ವ್ಯವಹಾರದಲ್ಲಿ ತೊಡಗಿರುವ ಎಲ್ಲ ಅಧಿಕೃತ ವ್ಯಕ್ತಿಗಳಿಗೆ

**ವಿದೇಶೀ ವಿನಿಮಯ ನಿರ್ವಹಣೆ ಕಾಯಿದೆ (ಎಫ್ಇಎಂಎ), ೧೯೯೯**

ಎಡಿ (ಎಂಎ ಶ್ರೇಣಿ) ಸುತ್ತೋಲೆ ಸಂಖ್ಯೆ ೧೧ ದಿನಾಂಕ ೧೬ನೇ ಮೇ ೨೦೦೦ದ ಕಡೆ ಎಲ್ಲ ಪೂರ್ಣ ಸಜ್ಜಿತ ಹಣ ಪರಿವರ್ತನಕಾರರ (ಎಫ್ಎಫ್ಎಂಸಿಗಳು) ಗಮನವನ್ನು ಸೆಳೆಯಲಾಗಿದೆ. ಈ ಸುತ್ತೋಲೆಯಲ್ಲಿ, ಅದರಲ್ಲಿ ಒಳಗೊಂಡಿರುವ ನಿರ್ದೇಶನಗಳು, ಉಚಿತ ಬದಲಾವಣೆಗಳೊಂದಿಗೆ, ಹಣ ಪರಿವರ್ತನೆಕಾರರಿಗೆ ಅನ್ವಯಿಸತಕ್ಕದ್ದೆಂದು ಮತ್ತು ಅವು ಕಾಲಕಾಲಕ್ಕೆ ತಿದ್ದುಪಡಿಯಾದಂತೆ ಎಫ್ಎಲ್ಎಂ/ಆರ್ಎಲ್ಎಂ ನ ಉಪಬಂಧಗಳಿಂದ ನಿಯಂತ್ರಿಸಲ್ಪಡುವುದು ಮುಂದುವರೆತಕ್ಕದ್ದೆಂದು ಸೂಚಿಸಲಾಗಿದೆ. ಎಫ್ಇಎಂಎ, ೧೯೯೯ರ ಅನ್ವಯ ಪ್ರಸಕ್ತ ವಿನಿಯಮನಗಳು ಈ ಮುಂದಿನಂತೆ ಮಾರ್ಪಾಡುಗೊಳ್ಳತಕ್ಕದ್ದು.

## ೧. ಅನುಮೋದಿತ ಉದ್ದೇಶಗಳಿಗೆ ಬಿಡುಗಡೆ ಮಾಡಲು ಅನುಮತಿಸಲಾದ ವಿದೇಶೀ ವಿನಿಯಮದ ಪರಿಮಾಣ

(ಎ) ಯಾವುದೇ ದೇಶಕ್ಕೆ (ನೇಪಾಳ ಮತ್ತು ಭೂತಾನವನ್ನು ಹೊರತುಪಡಿಸಿ) ಒಂದು ಅಥವಾ ಹೆಚ್ಚು ಖಾಸಗಿ ಭೇಟಿಗಳನ್ನು ನೀಡುವುದಕ್ಕೆ ಒಂದು ಕ್ಯಾಲೆಂಡರ್ ವರ್ಷದಲ್ಲಿ ಒಬ್ಬ ವ್ಯಕ್ತಿಗೆ, ಬಿಟಿಕ್ಯೂ (ಎಫ್ಎಲ್ಎಂ ನ ಪ್ಯಾರಾ ೧೦) ಅಡಿಯಲ್ಲಿ ಈಗ ಅನುಮತಿಸಲಾಗಿರುವ ವಿದೇಶೀ ವಿನಿಮಯದ ಪರಿಮಾಣಕ್ಕೆ ಪ್ರತಿಯಾಗಿ ೫೦೦೦ ಅಮೇರಿಕಾ ಡಾಲರ್‌ಗೆ ಮೀರದ ವಿದೇಶೀ ವಿನಿಮಯ.

(ಬಿ) ವ್ಯಾಪಾರ ವ್ಯವಹಾರದ ಪ್ರವಾಸದ ಸಂದರ್ಭದಲ್ಲಿ ತಂಗುವ ಅವಧಿಯನ್ನು ಗಣಿಸದೆ ಒಬ್ಬ ವ್ಯಕ್ತಿಗೆ ಈಗ ಹಾಲಿ ಇರುವ ವಿವಿಧ ವಿದೇಶೀ ವಿನಿಮಯ ಶ್ರೇಣಿಗಳಿಗೆ ಪ್ರತಿಯಾಗಿ ೨೫೦೦೦ ಅಮೇರಿಕಾ ಡಾಲರ್‌ಗೆ ಮೀರದ ವಿದೇಶೀ ವಿನಿಮಯ.

## ೨. ದಸ್ತಾವೇಜೀಕರಣ

ವಿದೇಶೀ ವಿನಿಮಯವನ್ನು ಬಿಡುಗಡೆ ಮಾಡುವಾಗ ಹಣ ಪರಿವರ್ತನೆಕಾರರು ಪರಿಶೀಲಿಸತಕ್ಕ ದಸ್ತಾವೇಜುಗಳನ್ನು ಇನ್ನು ಮುಂದೆ ರಿಸರ್ವ್ ಬ್ಯಾಂಕು ನಿರ್ದಿಷ್ಟ ಪಡಿಸುವುದಿಲ್ಲ ಎಂದು ನಿರ್ಧರಿಸಲಾಗಿದೆ. ಈ ಸಂಬಂಧದಲ್ಲಿ ವಿದೇಶೀ ವಿನಿಮಯ ನಿರ್ವಹಣೆ ಕಾಯಿದೆ, ೧೯೯೯ (೧೯೯೯ರ ೪೨) ೧೦ನೇ ಪ್ರಕರಣದ (೫) ನೇ ಉಪ ಪ್ರಕರಣದ ಕಡೆಗೆ ಹಣ ಪರಿವರ್ತನೆಕಾರರ ಗಮನವನ್ನು ಸೆಳೆಯಲಾಗಿದೆ. ಈ ಉಪ ಪ್ರಕರಣವು, ಒಬ್ಬ ಅಧಿಕೃತ ವ್ಯಕ್ತಿಯು ಯಾರೇ ವ್ಯಕ್ತಿಯ ಪರವಾಗಿ ವಿದೇಶೀ ವಿನಿಮಯದಲ್ಲಿ ಯಾವುದೇ

ವ್ಯವಹಾರವನ್ನು ಕೈಗೊಳ್ಳುವುದಕ್ಕೆ ಮೊದಲು, ವ್ಯವಹಾರವು ಕಾಯಿದೆ ಅಥವಾ ಅದರಡಿಯಲ್ಲಿ ರಚಿಸಿದ ಯಾವುದೇ ನಿಯಮ ನಿಬಂಧನೆಗಳ, ಹೊರಡಿಸಿದ ಅಧಿಸೂಚನೆ, ನಿರ್ದೇಶನ ಅಥವ ಆದೇಶದ ಉಪಬಂಧಗಳ ಯಾವುದೇ ಉಲ್ಲಂಘನೆಯನ್ನು ಅಥವಾ ಅವುಗಳಿಂದ ತಪ್ಪಿಸಿಕೊಳ್ಳುವುದನ್ನು ಒಳಗೊಂಡಿಲ್ಲ ಮತ್ತು ಉಲ್ಲಂಘನೆಯ ಅಥವಾ ತಪ್ಪಿಸಿಕೊಳ್ಳುವ ಉದ್ದೇಶಕ್ಕಾಗಿ ರೂಪಿಸಿದ್ದಲ್ಲ ಎಂದು ಯುಕ್ತವಾಗಿ ತನಗೆ ಮನವರಿಕೆ ಮಾಡಿಕೊಡಬಲ್ಲಂಥ ಘೋಷಣೆಯನ್ನು ಮಾಡುವಂತೆ ಮತ್ತು ಅಂಥ ಮಾಹಿತಿಯನ್ನು ನೀಡುವಂತೆ ಆ ವ್ಯಕ್ತಿಯನ್ನು ಅಗತ್ಯಪಡಿಸತಕ್ಕದ್ದು ಎಂದು ಉಪಬಂಧಿಸುತ್ತದೆ. ವ್ಯವಹಾರವನ್ನು ಯಾವುದರ ಆಧಾರದ ಮೇಲೆ ಮಾಡಲಾಗಿದೆಯೋ ಆ ಯಾವುದೇ ಮಾಹಿತಿಯ/ ದಸ್ತಾವೇಜಿನ ದಾಖಲೆಯನ್ನು ರಿಸರ್ವ್ ಬ್ಯಾಂಕ್ ನಿಂದ ಪರಿಶೀಲನೆಗಾಗಿ ಇಡುವಂತೆ ಹಣ ಪರಿವರ್ತನಕಾರರಿಗೆ ಸೂಚಿಸಲಾಗಿದೆ. ಅಲ್ಲದೆ ಸದರಿ ಖಂಡವು ಸದರಿ ವ್ಯಕ್ತಿಯು (ಅರ್ಜಿದಾರ) ಅಂಥ ಯಾವುದೇ ಅಗತ್ಯತೆಯನ್ನು ಪಾಲಿಸಲು ನಿರಾಕರಿಸಿದಲ್ಲಿ ಅಥವ ಅದನ್ನು ಅತೃಪ್ತಿಕರವಾಗಿ ಪಾಲಿಸಿದಲ್ಲಿ ಅಧಿಕೃತ ವ್ಯಕ್ತಿಯು, ವ್ಯವಹಾರವನ್ನು ಕೈಗೊಳ್ಳಲು ಲಿಖಿತದಲ್ಲಿ ನಿರಾಕರಿಸತಕ್ಕದ್ದು ಮತ್ತು ವ್ಯಕ್ತಿಯು ಯಾವುದೇ ಉಲ್ಲಂಘನೆ ಮಾಡಲು/ ತಪ್ಪಿಸಿಕೊಳ್ಳಲು ಯೋಚಿಸಿದ್ದಾನೆಂದು ತಾನು ನಂಬಲು ಕಾರಣಗಳಿದ್ದರೆ, ಆ ವಿಷಯವನ್ನು ರಿಸರ್ವ್ ಬ್ಯಾಂಕ್ ಗೆ ವರದಿ ಮಾಡತಕ್ಕದ್ದು.

೩. ಎಫ್‌ಎಫ್‌ಎಂಸಿ ಗಳಿಗೆ ಅವು ಎಫ್‌ಎಲ್‌ಎಂ ನ ಇತರ ಎಲ್ಲ ಉಪಬಂಧಗಳಿಗೆ ಒಳಪಡುತ್ತಾ ಮುಂದುವರೆಯಬೇಕೆಂದು ಸಲಹೆ ಮಾಡಲಾಗಿದೆ.

೪. ಎಫ್‌ಎಲ್‌ಎಂ ಗೆ ತಿದ್ದುಪಡಿಗಳನ್ನು ಪ್ರತ್ಯೇಕವಾಗಿ ನೀಡಲಾಗುವುದು. ಈ ಮಧ್ಯೆ ಅಧಿಕೃತ ವ್ಯಕ್ತಿಗಳು ಈ ಸುತ್ತೋಲೆಯ ಒಳಾಂಶಗಳನ್ನು ತಮ್ಮ ಘಟಕಗಳ ಗಮನಕ್ಕೆ ತರತಕ್ಕದ್ದು.

೫. ಈ ಸುತ್ತೋಲೆಯಲ್ಲಿ ಒಳಗೊಂಡಿರುವ ನಿರ್ದೇಶನಗಳನ್ನು ವಿದೇಶೀ ವಿನಿಮಯ ನಿರ್ವಹಣೆ ಕಾಯಿದೆ, ೧೯೯೯ (೧೯೯೯ರ ೪೨) ರ ೧೧ (೧) ನೇ ಪ್ರಕರಣದ ೧೦ (೪) ನೇ ಉಪ ಪ್ರಕರಣದ ಅಡಿಯಲ್ಲಿ ನೀಡಲಾಗಿದೆ. ಈ ನಿರ್ದೇಶನಗಳ ಯಾವುದೇ ಉಲ್ಲಂಘನೆಯು ಅಥವಾ ಈ ನಿರ್ದೇಶನಗಳನ್ನು ಪಾಲಿಸದಿರುವುದು ಕಾಯಿದೆಯ ಅಡಿಯಲ್ಲಿ ನಿರ್ದಿಷ್ಟಪಡಿಸಲಾಗಿರುವ ದಂಡಗಳಿಗೆ ಒಳಪಡುತ್ತದೆ.

ತಮ್ಮ ವಿಶ್ವಾಸಿ,

ಬಿ. ಮಹೇಶ್ವರನ್,
ಮುಖ್ಯ ಪ್ರಧಾನ ವ್ಯವಸ್ಥಾಪಕ.